ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-12-1997.

# *ಈ ಹೊಸ ವರ್ಷವನ್ನು ಮುಕ್ತಿ ವರ್ಷವನ್ನಾಗಿ ಆಚರಿಸಿ, ಸಫಲ ಮಾಡಿ ಸಫಲತೆಯನ್ನು ಪಡೆಯಿರಿ*

(इस नये वर्ष को मुक्ति वर्ष मनाओ, सफल करो – सफलता लो)

ಇಂದು ಬಾಪ್‌ದಾದಾ ತಮ್ಮ ನವಜೀವನದ ಶ್ರೇಷ್ಠ ಆತ್ಮರಿಗೆ, ನವಯುಗವನ್ನು ರಚಿಸುವ ಆತ್ಮರಿಗೆ ಶುಭಾಷಯಗಳನ್ನು ನೀಡುತ್ತಿದ್ದಾರೆ. ಪ್ರಪಂಚದವರಿಗಾಗಿ ಹೊಸ ವರ್ಷ ಆರಂಭವಾಗುತ್ತಿದೆ, ಮಕ್ಕಳಾದ ನಿಮ್ಮ ಮನಸ್ಸಿನಲ್ಲಿ ನವಯುಗ ನೆನಪಿಗೆ ಬರುತ್ತಿದೆ. ಹೇಗೆ ನಾಳೆ ಹೊಸ ವರ್ಷ ಬರಲಿದೆಯೋ, ಅದೇ ರೀತಿ ನವಯುಗವು ಸಹ ನಾಳೆಯೇ ಬರಲಿದೆ. ಈ ರೀತಿ ಸ್ಮೃತಿ ಬರುತ್ತದೆಯೇ- ನಮ್ಮ ಹೊಸ ಯುಗ ಬಂದಿತು ಎಂದರೆ ಬಂದಿತು? ಇಂದಿನ ದಿನ ಮನುಷ್ಯಾತ್ಮರ ಹೃದಯದಲ್ಲಿ ಹೊಸ ವರ್ಷಕ್ಕಾಗಿ ಖುಷಿ ಇರುತ್ತದೆ, ಅಲ್ಪ ಕಾಲದ ಉಲ್ಲಾಸವಿದೆ, ಅದೇ ರೀತಿ ನೀವು ಆತ್ಮರಿಗೆ ನವಯುಗ ಬರುತ್ತಿರುವುದಕ್ಕಾಗಿ ಸದಾ ಕಾಲದ ಖುಷಿ ಇದೆ. ಇಂದು ಹಾಗೂ ನಾಳೆಯ ಮಾತು ಎನಿಸುತ್ತದೆ. ಇಂದು ಹಳೆಯ ಯುಗ, ನಾಳೆ ಹೊಸ ಯುಗ ಸಮ್ಮುಖದಲ್ಲಿ ನಿಂತಿದೆ. ಡ್ರಾಮಾನುಸಾರ ಇಂದು ಹಾಗೂ ನಾಳೆಯ ಮಾತಾಗಿದೆ, ಈ ರೀತಿ ಸ್ಪಷ್ಟ ಸ್ಮೃತಿಯ ಅನುಭವ ಆಗುತ್ತದೆಯೇ? ಅಥವಾ ಕೇವಲ ಹೊಸ ವರ್ಷವನ್ನು ಆಚರಿಸುವುದಕ್ಕಾಗಿ ಬಂದಿದ್ದೀರಾ? ಹೊಸ ವರ್ಷ ನವಯುಗದ ನೆನಪು ತರಿಸುತ್ತದೆ. ನಾಳೆ ನಾವು ಏನಾಗುತ್ತೇವೆ ಎಂಬ ಈ ಉತ್ಸಾಹ-ಉಲ್ಲಾಸ ಹೃದಯದಲ್ಲಿ ಇರುತ್ತದೆಯೇ? ತಮ್ಮ ಶರೀರ ರೂಪಿ ವಸ್ತ್ರ ಸಮ್ಮುಖದಲ್ಲಿ ಬರುತ್ತದೆಯೇ? ನೆನಪಿದೆಯೇ ನಿಮ್ಮ ಹೊಸ ಶರೀರ ಹೊಸ ಯುಗದಲ್ಲಿ ಎಷ್ಟು ಸುಂದರವಾಗಿತ್ತು ಎಂದು? ಎಂತಹ ಯುಗವಾಗಿತ್ತು, ಎಂತಹ ರಾಜ್ಯವಿತ್ತು, ಯಾವ ರೀತಿ ಪ್ರಕೃತಿ ದಾಸಿಯಾಗಿತ್ತು, ಸತೋಪ್ರಧಾನವಾಗಿತ್ತು! ಆ ರಾಜ್ಯಾಧಿಕಾರಿ ಸ್ಥಿತಿಯ ಸ್ಮೃತಿ ಸ್ಪಷ್ಟವಾಗಿದೆಯೇ? ಕಾಣಿಸುತ್ತಾ ಇದೆಯೇ, ಆ ಹೊಸ ಪ್ರಪಂಚ ಎಷ್ಟು ಸುಂದರವಾಗಿದೆ? ಒಂದು ಸೆಕೆಂಡಿನಲ್ಲಿ ತಮ್ಮ ರಾಜ್ಯ ಅಧಿಕಾರದ ಅನುಭವ ಮಾಡಲು ಸಾಧ್ಯವೇ ಅಥವಾ ಮಾಡುತ್ತಾ ಇರುವಿರೇ?

ಕೇವಲ ಒಂದು ಕ್ಷಣದಲ್ಲಿ ನವಯುಗಕ್ಕೆ ಹೋಗಿಬಿಡಿ. ಹೋಗಲು ಬರುತ್ತದೆಯೇ? ಎಷ್ಟು ಬಾರಿ ಈ ರಾಜ್ಯಾಧಿಕಾರವನ್ನು ಪ್ರಾಪ್ತಿಮಾಡಿಕೊಂಡಿದ್ದೀರಿ, ನೆನಪಿದೆಯೇ? ಅನುಭವ ಮಾಡಿ ತಮ್ಮ ರಾಜ್ಯ ಎಷ್ಟು ಪ್ರಿಯವಾಗಿದೆ ! ಭಿನ್ನ(ಅತೀತ)ವೂ ಆಗಿದೆ, ಪ್ರಿಯವೂ ಆಗಿದೆ. ಎಂದಮೇಲೆ ಕ್ಷಣದಲ್ಲಿ ಕೇವಲ ತಮ್ಮ ರಾಜ್ಯ ಹಾಗೂ ತಮ್ಮ ವಿಶ್ವ ರಾಜ್ಯಾಧಿಕಾರಿ ಸ್ವರೂಪವು ಸ್ಮೃತಿಯಲ್ಲಿ ಬಂದುಬಿಡಲಿ. ಆ ಜನರು ಹೊಸ ವರ್ಷದಲ್ಲಿ ಪರಸ್ಪರ ಅಲ್ಪಕಾಲದ ಉಡುಗೊರೆಯನ್ನು ಕೊಡುತ್ತಾರೆ ಹಾಗೂ ತಂದೆ ನವಯುಗದ, ವಿಶ್ವ ರಾಜ್ಯಾಧಿಕಾರದ ಉಡುಗೊರೆಯನ್ನು ಕೊಡುತ್ತಾರೆ. ಈ ಅವಿನಾಶಿ ಉಡುಗೊರೆ ಈ ಸಮಯದಲ್ಲಿ ತಂದೆಯ ಮೂಲಕ ನಿಮ್ಮೆಲ್ಲರಿಗಾಗಿ ನಶ್ಚಿತವಾದ ಭವಿಷ್ಯವಾಗಿಬಿಡುತ್ತದೆ. ಆ

ಭವಿಷ್ಯವನ್ನು ಯಾರೂ ಸಹ ಮುಂದೂಡಲು ಸಾಧ್ಯವಿಲ್ಲ. ಅಚಲವಾಗಿದೆ, ಅಖಂಡವಾಗಿದೆ. ಎಂದ ಮೇಲೆ ಇಂತಹ ಉಡುಗೊರೆ ಸಿಕ್ಕಿದೆ ಅಲ್ಲವೇ? ಹಾಗಾದರೆ ಈ ಉಡುಗೊರೆಯನ್ನು ಸಂಭಾಲನೆ ಮಾಡಿಕೊಂಡು ಇಟ್ಟುಕೊಳ್ಳಿ, ಯಾವುದೇ ದರೋಡೆಕಾರರು ಈ ಉಡುಗೊರೆಯನ್ನು ತೆಗೆದುಕೊಳ್ಳದಿರಲಿ. ಎಲ್ಲರ ಬಳಿ ಡಬಲ್ ಬೀಗ ಇದೆಯಲ್ಲವೇ? ಇತ್ತೀಚೆಗೆ ಸಿಂಗಲ್ ಲಾಕ್ ನಡೆಯುವುದಿಲ್ಲ, ಡಬಲ್ ಬೀಗ ಬೇಕಾಗಿದೆ. ಗೋದ್ರೆಜ್ನ ಬೀಗ ಅಲ್ಲ, ಗಾಡ್ ನ ಬೀಗ ಬೇಕಾಗಿದೆ. ಎಂದ ಮೇಲೆ ಭಗವಂತ ಇಂತಹ ಬೀಗವನ್ನು ಕೊಟ್ಟಿದ್ದಾರೆ. ಇದನ್ನು ಯಾರು ಸಹ ಮುರಿಯಲು ಸಾಧ್ಯವಿಲ್ಲ. ಒಂದು ವೇಳೆ ಹುಡುಗಾಟಿಕೆಯಲ್ಲಿ ಬಂದು ಬಿಟ್ಟರೆ ದರೋಡೆಕಾರರು ಬಂದು ಬಿಡುತ್ತಾರೆ. ದರೋಡೆಕಾರರು ಸಹ ಬುದ್ಧಿವಂತರಾಗಿರುತ್ತಾರೆ. ಅವರಿಗೆ ತಿಳಿದುಬಿಡುತ್ತದೆ ಇವರ ಬೀಗ ಇಂದು ಸಡಿಲವಾಗಿದೆ, ಆದ್ದರಿಂದ ಹುಡುಗಾಟಿಕೆಯಲ್ಲಿ ಬರಬೇಡಿ.

ಹಾಗಾದರೆ ಈ ಹೊಸ ವರ್ಷದಲ್ಲಿ ಸ್ವಯಂನ ಪ್ರತಿ ಹಾಗೂ ಸೇವೆಯ ಪ್ರತಿ ಯಾವುದಾದರೂ ಹೊಸ ಯೋಜನೆಯನ್ನು ಮಾಡಿದ್ದೀರಾ? ಸಮ್ಮೇಳನವನ್ನು ಮಾಡಬೇಕು, ಡೈಲಾಗ್ ಮಾಡಬೇಕು, ಇದೆಲ್ಲಾ ಇದ್ದೇ ಇದೆ ಆದರೆ, ಹೊಸ ಯೋಜನೆ ಏನು ಮಾಡುವಿರಿ? ಬಾಪ್‌ದಾದಾರವರು ಈ ಹೊಸ ವರ್ಷದಲ್ಲಿ, ದೇಶ ಹಾಗೂ ವಿದೇಶದಲ್ಲಿ ವಿಭಿನ್ನ ವರ್ಗಗಳ ವಿಶೇಷ ಆತ್ಮರ ಒಂದು ಹೂಗುಚ್ಛನ್ನು ನೋಡಲು ಬಯಸುತ್ತಾರೆ. ವರ್ಗಗಳ ಸೇವೆಯನ್ನಂತೂ ಬಹಳ ಮಾಡಿದ್ದೀರಿ ಅಲ್ಲವೇ, ಈಗ ಪ್ರತಿಯೊಂದು ವರ್ಗದಿಂದ ಒಂದೊಂದು ರತ್ನವನ್ನು ತಯಾರು ಮಾಡಿರಿ, ಒಂದು ವರ್ಗವೂ ತಪ್ಪದಿರಲಿ, ಏಕೆ? ಸಮಯ ಸಮೀಪ ಬರುತ್ತಿದೆ ಎಂದ ಮೇಲೆ ಯಾವುದೇ ವರ್ಗದವರು ದೂರು ಕೊಡದಿರಲಿ- ನಮ್ಮ ವರ್ಗದವರು ಉಳಿದುಕೊಂಡುಬಿಟ್ಟರು ಎಂದು. ಒಂದೊಂದು ವರ್ಗದಿಂದಲೂ ವಿಶೇಷವಾಗಿ ಒಂದೊಂದು ಕ್ವಾಲಿಟಿಯವರು(ಗುಣದವರು) ಇರಲಿ ಅವರು ಮೈಕ್ ನ (ಸಂದೇಶ ಹರಡಿಸುವ) ಕಾರ್ಯ ಮಾಡುವಂತೆ ಆಗಲಿ, ಏಕೆಂದರೆ ಹೇಗೆ ಸಮಯ ಸಮೀಪ ಬರುತ್ತಿದೆ. ಎಂದ ಮೇಲೆ ಸರ್ವ ವರ್ಗದವರು, ಸರ್ವ ಧರ್ಮದವರು ಎಲ್ಲರ ಮುಖದಿಂದ ಒಂದೇ ಕೂಗು ಹೊರಬರಲಿ- ತಂದೆ ಬಂದು ಬಿಟ್ಟಿದ್ದಾರೆ, ಏಕೆಂದರೆ ಈ ಸಂಗಮ ಯುಗದಲ್ಲಿಯೇ ಎಲ್ಲಾ ಧರ್ಮಸ್ಥಾಪಕ ಆತ್ಮರ ಹಾಗೂ ಸರ್ವ ವರ್ಗಗಳ ಆತ್ಮರಲ್ಲಿ ಬೀಜವು ಬೀಳಲಿದೆ. ಅವರು ಇಷ್ಟು ಶಕ್ತಿಯನ್ನು ತಮ್ಮಲ್ಲಿ ತುಂಬಿಕೊಂಡು ಹೋಗುತ್ತಾರೆ ನಂತರ ತಮ್ಮ ತಮ್ಮ ಸಮಯದಲ್ಲಿ ವರ್ಗ ಹಾಗೂ ಧರ್ಮದ ಇನ್ವೆಂಟರ್( ಸಂಶೋಧಕ) ಆಗುತ್ತಾರೆ. ಎಂದ ಮೇಲೆ ಎಲ್ಲಾ ಬೀಜವನ್ನು ನೀವೇ ತಯಾರು ಮಾಡಿಕೊಂಡು ಇಟ್ಟುಕೊಳ್ಳಬೇಕು, ಅವರೇ ಸಮಯಕ್ಕೆ ತಮ್ಮ ತಮ್ಮ ಡಿಪಾರ್ಟ್ಮೆಂಟ್(ವಿಭಾಗದ) ನ ನಿಮಿತ್ತರಾಗುತ್ತಾರೆ, ಏಕೆಂದರೆ ಬೀಜ ತಂದೆಯಾಗಿದ್ದಾರೆ ಹಾಗೂ ನೀವು ಬ್ರಾಹ್ಮಣ ಆತ್ಮರು ಕಾಂಡ ಆಗಿದ್ದೀರಿ, ಸರ್ವ ಆತ್ಮರು ಬೀಜ ಹಾಗೂ ಕಾಂಡದ ಮೂಲಕವೇ ಬರುತ್ತಾರೆ . ಹಾಗಾದರೆ ಇಂತಹ ಹೂಗುಚ್ಛವನ್ನು ತಂದೆಯ ಸಮ್ಮುಖದಲ್ಲಿ ತೆಗೆದುಕೊಂಡು ಬನ್ನಿರಿ, ವಿದೇಶದವರು ಹಾಗೂ ದೇಶದವರು ಇಬ್ಬರು. ಒಂದೊಂದು ಸ್ಯಾಂಪಲ್(ಉದಾಹರಣೆ) ತೆಗೆದುಕೊಂಡು ಬನ್ನಿರಿ, ಸ್ಯಾಂಪಲ್ ನಿಂದ ಅನ್ಯ ಅನೇಕರು ಸ್ವತಹವಾಗಿಯೇ ತಯಾರಾಗುತ್ತಾರೆ. ಆದರೆ ಒಬ್ಬೊಬ್ಬರು ಪವರ್ಫುಲ್(ಶಕ್ತಿಶಾಲಿ) ಮೈಕ್(ಸಂದೇಶ ಕೊಡುವವರು) ಆಗಿರಿ, ಇಂತಹ ಬೀಜ ಎನ್ನಿರಿ, ಧರ್ಮ ಅಥವಾ ವರ್ಗ ಎಂದು ಹೇಳಿರಿ ಅಥವಾ ವೆರೈಟಿ(ವಿಭಿನ್ನ) ಹೂಗಳ ಹೂಗುಚ್ಛ ಎಂದು ಹೇಳಿರಿ , ಇದು ತಯಾರಾಗಬೇಕು. ಒಬ್ಬರು ಸಹ ಮಿಸ್ ಆಗಬಾರದು. ಆಗ ವಿಶ್ವಕಲ್ಯಾಣಕಾರಿ ಹಾಗೂ ಸರ್ವ ಆತ್ಮರ ನಿಮಿತ್ತ ಉದ್ಧಾರ ಮಾಡುವ ಆತ್ಮರು ಎಂದು

ಹೇಳಲಾಗುವುದು. ಒಂದು ಕೊಂಬೆಯೂ ಕಡಿಮೆಯಾಗಬಾರದು, ಸರ್ವ ಶಾಖೆಗಳು ಇರಬೇಕು. ಬಲೆ ನಿಮ್ಮ ನವಯುಗದಲ್ಲಿ ಕೆಲವು ವರ್ಗಗಳು ಇರುವುದಿಲ್ಲ ಆದರೆ ಆ ಆತ್ಮರಲ್ಲಿಯೂ ಸಹ ದ್ವಾಪರದಲ್ಲಿ ಅಥವಾ ಕಲಿಯುಗದಲ್ಲಿ ಯಾರು ಸಂಶೋಧಕರು ನಿಮಿತ್ತರಾಗಿದ್ದಾರೆಯೋ, ಅವರಿಗೂ ನಿಮ್ಮ ಮೂಲಕವೇ ಶಕ್ತಿ ಸಿಗಬೇಕಾಗಿದೆ. ಹೇಗೆ ಸರ್ವ ಧರ್ಮ ಪಿತರು ನಿಮ್ಮ ಮುಂದೆ ತಂದೆಯ ಬಾವುಟ, ಪ್ರತ್ಯಕ್ಷತೆಯ ಬಾವುಟವನ್ನು ಹಾರಿಸುವುದರಲ್ಲಿ ಸಹಯೋಗಿ ಆಗುತ್ತಾರೆಯೋ, ಅದೇ ರೀತಿ ಸರ್ವ ವರ್ಗದವರು ಸಹ ಪ್ರತ್ಯಕ್ಷತೆಯ ಬಾವುಟವನ್ನು ಹಾರಿಸುವುದರಲ್ಲಿ ಸಹಯೋಗಿಗಳಾಗುತ್ತಾರೆ, ಆಗಲೇ ಸರ್ವರ ಸಹಯೋಗದಿಂದ ಸುಖಮಯ ಪ್ರಪಂಚದ ಸ್ಥಾಪನೆ ಎಂದು ಹೇಳಲಾಗುತ್ತದೆ . ಸಹಯೋಗಿಗಳಾಗುತ್ತಾ ಇದ್ದಾರೆ ಆದರೆ ಅವರಲ್ಲಿಯೂ ಈಗ ವಿಶೇಷ ಆತ್ಮರನ್ನು ಸಹಯೋಗದಲ್ಲಿ ಮುಂದುವರಿಸಿ, ನಿಮ್ಮಿತರನ್ನಾಗಿ ಮಾಡಿ. ನಿಮ್ಮಿತರನ್ನಾಗಿ ಮಾಡುವ ಬೀಜವನ್ನು ಹಾಕಿ. ತಿಳಿಯಿತೇ ಏನು ಮಾಡಬೇಕು ಎಂದು? ವಿದೇಶದಲ್ಲಿಯೂ ಸಹ ಈಗ ಐ. ಪಿ ಹಾಗೂ ವಿ. ಐ. ಪಿ ಯರ ಕನೆಕ್ಷನ್( ಸಂಪರ್ಕ) ಸಹಜವಾಗಿ ಬಿಟ್ಟಿದೆ ಅಲ್ಲವೇ. ಪರಿಶ್ರಮ ಇಲ್ಲ ಅಲ್ಲವೇ? ಸಹಜವಾಗಿದೆಯೇ ಅಥವಾ ಪರಿಶ್ರಮ ಇದೆಯೇ? ಹಾಗಾದರೆ ನೀವೆಲ್ಲರೂ ಯಾವಾಗ ಮುಂದಿನ ಬಾರಿ ಹೊಸ ವರ್ಷಕ್ಕೆ ಮತ್ತೆ ಬರುತ್ತೀರೋ ಆಗ ಬರುವ ಹೊಸ ವರ್ಷದ ಉಡುಗೊರೆಯಲ್ಲಿ ಬಾಪ್‌ದಾದಾರವರು ಇಂತಹ ಹೂಗುಚ್ಛವನ್ನು ನೋಡಲು ಬಯಸುತ್ತಾರೆ. ಒಂದು ವರ್ಷವಿದೆ, ಕಡಿಮೆ ಇಲ್ಲ. ದೇಶದವರು ಮಾಡಬೇಕು ವಿದೇಶದವರು ಮಾಡಬೇಕೇ?(ಮಾಡುತ್ತೇವೆ) ಅವಶ್ಯ ಮಾಡುವಿರಿ. ಹೇಳಿರಿ - ಆಗಿಯೇ ಬಿಟ್ಟಿದೆ. ಕೇವಲ ನಿಮಿತ್ತರಾಗಬೇಕಾಗಿದೆ. ಡಬಲ್ ವಿದೇಶಿಯರು ಹೇಳಿ? ಎಲ್ಲಾ ವಿದೇಶಿಯರು ಚಪ್ಪಾಳೆ ಹೊಡೆಯಿರಿ. ಒಳ್ಳೆಯದು, ನೋಡೋಣ ಮೊದಲು ಯಾರು ತಯಾರು ಮಾಡುತ್ತಾರೆ- ದೇಶದವರೇ ಅಥವಾ ವಿದೇಶದವರೇ ಎಂದು? ಎಷ್ಟು ದೊಡ್ಡ ಹೂಗುಚ್ಛವನ್ನು ತಯಾರು ಮಾಡುವಿರಿ ಎಂದು? ಸರಿಯೇ? ನಾಲ್ಕಾರು ಕಡೆಯವರು ಕೇಳಿಸಿಕೊಳ್ಳುತ್ತಿದ್ದಾರೆ, ವಿದೇಶದವರು ಸಹ ಕೇಳಿಸಿಕೊಳ್ಳುತ್ತಿದ್ದಾರೆ. ಈಗ ಉಮಂಗ ಬರುತ್ತಿದೆ ಅವರ ಮನಸ್ಸಿನಲ್ಲಿ ಯೋಜನೆಗಳು ತಯಾರಾಗುತ್ತಿದೆ- ಈ ರೀತಿ ಮಾಡಬೇಕು ಎಂದು. ಒಳ್ಳೆಯದು, ಇದಾಯಿತು ವಿಶ್ವಸೇವೆ.

ಸ್ವಯಂಗಾಗಿ ಏನನ್ನು ಮಾಡುವಿರಿ? ಇದರ ಯೋಜನೆಯನ್ನು ಸಹ ಮಾಡುವಿರಿ ಅಲ್ಲವೇ? ಏಕೆಂದರೆ ಸ್ವಕಲ್ಯಾಣದ ಶ್ರೇಷ್ಠ ಯೋಜನೆಯನ್ನು ಮಾಡದಿದ್ದರೆ ವಿಶ್ವ ಸೇವೆಯಲ್ಲಿ ಸಕಾಶ ಸಿಗಲು ಸಾಧ್ಯವಿಲ್ಲ ಆದ್ದರಿಂದ ಬಾಪ್‌ದಾದಾರವರು ಎಲ್ಲರ ಹೃದಯದ ಉತ್ಸಾಹ-ಉಲ್ಲಾಸವನ್ನು ತಿಳಿದುಕೊಂಡು ಇದನ್ನೇ ಹೇಳುತ್ತಾರೆ- ಪ್ರತಿಯೊಂದು ಉತ್ಸವದಲ್ಲಿ ಗೋಲ್ಡನ್ ಜುಬ್ಲಿಯಲ್ಲಾಗಲಿ, ಡೈಮಂಡ್ ಜುಬ್ಲಿಯಲ್ಲಾಗಲಿ, ಅಥವಾ ಸಿಲ್ವರ್ ಜುಬ್ಲಿಯಲ್ಲಾಗಲಿ, ಇನ್ನು ಬೇರೆ ಯಾವುದೆಲ್ಲಾ ಜುಬ್ಲಿಗಳು ಆಗಬೇಕಾಗಿದೆಯೋ ಅದರಲ್ಲಿ, ಮಕ್ಕಳು ಎಲ್ಲರೂ ಸಹ ಹೃದಯದಿಂದ, ಉತ್ಸಾಹ-ಉಲ್ಲಾಸದಿಂದ ತಮ್ಮ ಮನಸ್ಸಿನಲ್ಲಿ ತಂದೆಯೊಂದಿಗೆ ಈ ಪ್ರತಿಜ್ಞೆಯನ್ನು ಮಾಡಿದ್ದಾರೆ- ನಾವು ತಂದೆಯ ಸಮಾನ ಆಗಿ ತೋರಿಸುತ್ತೇವೆ ಎಂದು. ಎಲ್ಲರೂ ಈ ಪ್ರತಿಜ್ಞೆಯನ್ನು ಮಾಡಿದ್ದೀರಿ ಅಲ್ಲವೇ? ಡಬಲ್ ವಿದೇಶಿಯರು ಈ ಪ್ರತಿಜ್ಞೆ ಮಾಡಿದ್ದೀರಾ?(ಎಲ್ಲರೂ ಕೈ ಅಲುಗಾಡಿಸಿದರು) ಒಳ್ಳೆಯದು, ಶುಭಾಷಯಗಳು. ಪ್ರತಿಜ್ಞೆಯಂತೂ ಬಹಳ ಮಧುರವಾಗಿದೆ, ಬಹಳ ಒಳ್ಳೆಯದು, ಬಹಳ ಪ್ರಿಯವಾಗಿದೆ ಬಹಳ ಶಕ್ತಿಶಾಲಿ ಆಗಿ ಮಾಡಿದ್ದೀರಿ. ಈಗ ಕೇವಲ ಅದನ್ನು ನಿಭಾಯಿಸುತ್ತಾ ಇರಿ. ಪ್ರತಿಜ್ಞೆ ಮಾಡುವವರು ಆ ಸಮಯದಲ್ಲಿ ಬಹಳ ಉತ್ಸಾಹ-ಉಲ್ಲಾಸದಿಂದ ಮಾಡುತ್ತಾರೆ, ಧೈರ್ಯವನ್ನು ಬಹಳ ಚೆನ್ನಾಗಿ ಇಡುತ್ತಾರೆ ಆದರೆ ನಂತರ ಏನಾಗುತ್ತದೆ?

ಕೆಲವೊಮ್ಮೆ ಮಾಯೆ ಇಲಿಯ ರೂಪದಲ್ಲಿ ಬರುತ್ತದೆ, ಕೆಲವೊಮ್ಮೆ ಬೆಕ್ಕಿನ ರೂಪದಲ್ಲಿ ಬಂದುಬಿಡುತ್ತದೆ, ಬೆಕ್ಕು ಏನು ಮಾಡುತ್ತದೆ? ಮಿಯಾವ್- ಮಿಯಾವ್(ನಾನು ಬರಲೇ-ನಾನು ಬರಲೇ) ಎಂದು ಕೇಳುತ್ತದೆ ಅಲ್ಲವೇ. ಆಗ ಮಕ್ಕಳು ಏನು ಮಾಡುತ್ತಾರೆ? ನಾನು ನಾನು ನಾನು, ಈ ರೀತಿ ಬೆಕ್ಕಿನಂತೆ ಮಿಯಾವ್ ಮಿಯಾವ್ ಮಾಡಬೇಡಿ. ಇಲಿ ಏನು ಮಾಡುತ್ತದೆ ? ಇಲಿ ಬುದ್ಧಿ ಹೀನವಾಗಿ ಏನು ಸಿಗುತ್ತದೆಯೋ ಅದನ್ನು ತಿಂದುಬಿಡುತ್ತದೆ, ಕಚ್ಚಿಬಿಡುತ್ತದೆ. ಹಾಗೆಯೇ ಮಾಯೆಯು ಸಹ ಮಕ್ಕಳ ಖಜಾನೆಗಳನ್ನು ಕಚ್ಚಿ ತಿಂದುಬಿಡುತ್ತದೆ. ಕೆಲವೊಮ್ಮೆ ಹುಲಿ ಬಂದುಬಿಡುತ್ತದೆ, ಹುಲಿ ಏನು ಮಾಡುತ್ತದೆ? ನಿರ್ಭಯರಾಗಿರುವವರಿಗೂ ಭಯವನ್ನು ಹುಟ್ಟಿಸುತ್ತದೆ. ಸರ್ವಶಕ್ತಿವಂತ ಮಕ್ಕಳನ್ನು ಬಲಹೀನರನ್ನಾಗಿ ಮಾಡಿಬಿಡುತ್ತದೆ. ಈ ರೀತಿ ಮಾಡಬೇಡಿ, ಬರಲು ಬಿಡಬೇಡಿ, ಡಬಲ್ ಬೀಗವನ್ನು ಹಾಕಿ ಇಡಿ. ಈ ವರ್ಷ ಯಾರನ್ನು ಬರಲು ಬಿಡಬೇಡಿ.

ಈ ವರ್ಷವನ್ನು ಸರ್ವ ವಿಷಯಗಳಿಂದ ಮುಕ್ತಿ ವರ್ಷವನ್ನಾಗಿ ಆಚರಿಸಿ. ಮುಕ್ತಿ ವರ್ಷ. ಯಾವಾಗ ಈ ಮುಕ್ತಿ ವರ್ಷವನ್ನು ಆಚರಿಸುವಿರೋ ಆಗ ಮುಕ್ತಿಧಾಮಕ್ಕೆ ಹೋಗುವಿರಿ. ಇದಕ್ಕಾಗಿ ಏನು ಮಾಡುವಿರಿ? ಬಹಳ ಚಿಕ್ಕ ಮಾತಾಗಿದೆ, ದೊಡ್ಡ ಮಾತೇನಲ್ಲ. ಬಾಪ್‌ದಾದಾವರು ಕೇವಲ ಚಿಕ್ಕ ಸ್ಲೋಗನ್ ಕೊಡುತ್ತಿದ್ದಾರೆ " ಸಫಲ ಮಾಡಿ ಸಫಲತೆಯನ್ನು ಪಡೆಯಿರಿ" . ತಿಳಿಯಿತೇ! ಸಫಲ ಮಾಡಿ, ಸಫಲತೆಯನ್ನು ಪಡೆದುಕೊಳ್ಳಿ. ಏನನ್ನು ಸಫಲ ಮಾಡಬೇಕು? ಏನೆಲ್ಲಾ ನಿಮ್ಮ ಬಳಿ ಇದೆಯೋ, ನಿಮ್ಮ ಬಳಿ ಯಾವ ಸಂಪತ್ತು ಇದೆಯೋ ಅದನ್ನು- ಸಮಯ, ಸಂಕಲ್ಪ, ಶ್ವಾಸ ಹಾಗೂ ತನು- ಮನ- ಧನವನ್ನು ಸಫಲ ಮಾಡಿ, ವ್ಯರ್ಥವಾಗಿ ಕಳೆಯಬೇಡಿ ಆಪತ್ತಿನ ಕಾಲಕ್ಕಾಗಿ ಸಂಬಾಲನೆ ಮಾಡಿಕೊಂಡು ಇಡಬೇಡಿ. ಸಂಕಲ್ಪವನ್ನು ಸಫಲ ಮಾಡಿ. ಒಂದೊಂದು ಸಂಕಲ್ಪ ಇದು ನಿಮ್ಮ ಪ್ರಾಪರ್ಟಿ (ಸಂಪತ್ತು) ಆಗಿದೆ. ಯಾವ ರೀತಿ ಧನ ಸ್ಥೂಲ ಸಂಪತ್ತಾಗಿದೆಯಯೋ, ಅದೇ ರೀತಿ ಸೂಕ್ಷ್ಮ ಸಂಪತ್ತಾಗಿದೆ- ಸಮಯ, ಶ್ವಾಸ, ಸಂಕಲ್ಪ. ಒಂದು ಸಂಕಲ್ಪವು ವ್ಯರ್ಥ ಹೋಗದಿರಲಿ, ಸಫಲವಾಗಲಿ. ಮನಸಾ ಸೇವೆಯ ಮುಖಾಂತರವಾಗಲಿ, ವಾಚಾ ಆಗಲಿ, ಕರ್ಮಣಾ ಆಗಲಿ- ಪರಿಶೀಲನೆ ಮಾಡಿಕೊಳ್ಳಿರಿ. ಎಷ್ಟು ಸಫಲ ಮಾಡಿಕೊಂಡೆ? ಎಷ್ಟು ಜಮಾ ಮಾಡಿಕೊಂಡೆ? ಹಾಗೂ ಬಾಪ್‌ದಾದಾರವರು ಈ ವರ್ಷ ವಿಶೇಷವಾಗಿ ವರದಾನವನ್ನು ಕೊಡುತ್ತಿದ್ದಾರೆ- ಸಫಲ ಮಾಡಿ ಹಾಗೂ ಪದಮದಷ್ಟು ಸಫಲತೆಯ ಅನುಭವ ಮಾಡಿ. ಈ ಪ್ರತ್ಯಕ್ಷ ಫಲವನ್ನು ಸಹಜವಾಗಿ ಪ್ರಾಪ್ತಿ ಮಾಡಿಕೊಳ್ಳಬಹುದು, ಕೇವಲ ಸತ್ಯ ಹೃದಯದಿಂದ. ಸತ್ಯ ಹೃದಯದ ಮೇಲೆ ಭೋಲನಾಥ ತಂದೆ ಬಹಳ ಸಹಜವಾಗಿ ಖುಷಿಯಾಗುತ್ತಾರೆ. ಆದ್ದರಿಂದ ಸಫಲ ಮಾಡಿ. ಜ್ಞಾನ ಧನ, ಶಕ್ತಿಗಳ ಧನ, ಗುಣಗಳ ಧನವನ್ನು ಪ್ರತಿ ಸಮಯ ಸಫಲ ಮಾಡಿ. ಸಫಲ ಮಾಡುವುದು ಬರುತ್ತದೆಯೋ ಅಥವಾ ಪಕ್ಕಕ್ಕೆ ಸರಿಸುವುದು ಹಾಗೂ ಸಂಭಾಲನೆ ಮಾಡುವುದು ಚೆನ್ನಾಗಿ ಬರುತ್ತದೆಯೋ? ಪಕ್ಕಕ್ಕೆ ಸರಿಸಬೇಡಿ, ಸಂಪತ್ತನ್ನು ತೊಡಗಿಸಿ. ಎಲ್ಲವೂ ಇದ್ದಕ್ಕಿದ್ದಂತೆಯೇ ಆಗಬೇಕು ಎಂದು ಹೇಳುತ್ತೀರಿ ಎಂದ ಮೇಲೆ ಎವರ್ ರೆಡಿಯಾಗಬೇಕು( ಸದಾ ತಯಾರಾಗಿರಬೇಕು). ಹಾಗಾದರೆ ಏನೆಲ್ಲಾ ಇದೆಯೋ ಅದೆಲ್ಲವನ್ನು ಸಫಲ ಮಾಡಿ. ತಂದೆಗೆ ಬೇಕಾಗಿಲ್ಲ, ನಿಮಗಾಗಿ ಜಮಾ ಮಾಡಿಕೊಳ್ಳಿರಿ. ಬಾಪ್‌ದಾದಾರವರಂತೂ ದಾತ ಆಗಿದ್ದಾರೆ ಆದರೆ ಸಫಲ ಮಾಡುವುದು ಎಂದರೆ ಜಮಾ ಮಾಡುವುದು ಏಕೆಂದರೆ ಬಾಪ್‌ದಾದಾರವರು ಸಮಯ ಪ್ರಮಾಣ ಜಮಾದ ಖಾತೆಯನ್ನು ನೋಡಿದರು, ಪ್ರತಿಯೊಂದು ಮಗುವಿನ ಜಮಾದ ಖಾತೆ ಬಾಪ್‌ದಾದಾರವರ ಬಳಿ ಇದೆ. ಹಾಗಾದರೆ ಜಮಾದ ಖಾತೆಯಲ್ಲಿ ಏನನ್ನು ನೋಡಿದರು? ಕೆಲವು ಮಕ್ಕಳು ತಿಳಿಯುತ್ತಾರೆ

ಅಥವಾ ಬಹಳ ಹೇಳುತ್ತಾರೆ- ನಮ್ಮದು ಇದು ಜಮಾ ಇದೆ, ಇದು ಜಮಾ ಆಗಿದೆ, ಬಾಹ್ಯವಾಗಿ ಜಮಾದ ಖಾತೆಯನ್ನು ಬಹಳ ವರ್ಣನೆ ಮಾಡುತ್ತಾರೆ ಆದರೆ ತಂದೆಯ ಜಮಾದ ಖಾತೆಯಲ್ಲಿ ಎಷ್ಟು ಹೇಳುತ್ತಾರೋ, ಅದಕ್ಕಿಂತ ಬಹಳ ಕಡಿಮೆ ಜಮಾ ಇದೆ. ಏಕೆ? ಅದೇ ಮೊದಲನೆಯ ಪಾಠವಾಗಿದೆ "ನಾನು ಹಾಗೂ ನನ್ನತನ" . ನಾನು ಮಾಡಿದೆ, ನಾನು ಈ ಸೇವೆ ಮಾಡಿದೆ, ಈ ಕಾರ್ಯ ನನ್ನದಾಗಿದೆ ಎಂದು ಹೇಳುವುದಲ್ಲ. ಇದು ಜಮಾ ಮಾಡುವ ಸಮಯ, ಅವರು ತಿಳಿಯುತ್ತಾರೆ ನಮ್ಮದು ಜಮಾ ಆಗುತ್ತಿದೆ ಎಂದು ಆದರೆ ಅದು ಸ್ವತಹವಾಗಿ ಜಮಾದ ಖಾತೆಯಿಂದ ಹೊರಬಂದು, ವ್ಯರ್ಥದ ಖಾತೆಯಲ್ಲಿ ಜಮಾ ಆಗುತ್ತದೆ. ಇದು ಸ್ವತಹವಾದ ಸೂಕ್ಷ್ಮ ಮಶಿನರಿ(ಪ್ರಕ್ರಿಯೆ) ಆಗಿದೆ. ತಂದೆ ಮಾಡಿಸಿದರು, ತಂದೆಯ ಸೇವೆಯಾಗಿದೆ ನನ್ನ ಸೇವೆಯಲ್ಲ. ನಾನು ಮಾಡಿದೆ, ಅಲ್ಲ. ವರ್ಣನೆ ಮಾಡಬೇಡಿ, ನಾನು ಇದು ಮಾಡಿದೆ, ನಾನು ಇದನ್ನು ಮಾಡಿದೆ, ನಾನು ಇದನ್ನು ಮಾಡುತ್ತೇನೆ... ಈ ರೀತಿ ನಾನು ನಾನು ಎನ್ನಬೇಡಿ. ಬಾಬಾ ಬಾಬಾ ಎಂದು ಹೇಳಿ ಆಗ ಪದಮದಷ್ಟು ಜಮಾ ಆಗುವುದು. ನಾನು ನನ್ನದು ಎಂದು ಹೇಳಿದರೆ ಟ್ರಾನ್ಸ್ಫರ್ ( ವರ್ಗಾವಣೆ) ಆಗಿ ವ್ಯರ್ಥದ ಖಾತೆಯಲ್ಲಿ ಜಮಾ ಆಗಿ ಬಿಡುವುದು. ಇದು ಸ್ವತಹವಾದ ಮಷೀನರಿ ಬಹಳ ಫಾಸ್ಟ್( ತೀವ್ರ) ಆಗಿದೆ, ನಿಮಗೆ ತಿಳಿಯುವುದೇ ಇಲ್ಲ. ಇದರ ಪರಿಶೀಲನೆ ಸಹ ಬಹಳ ಸತ್ಯ ಹೃದಯದಿಂದ, ನನ್ನತನದಿಂದ ಅತೀತರಾಗಿರುವವರೇ ಮಾಡಲು ಸಾಧ್ಯ. ನೀವು ಆದಿರತ್ನರು ಆದಿ ಸ್ಥಾಪನೆಯಲ್ಲಿ ಬಂದ ದಿನ, ಸೇವೆಯಲ್ಲಿ ತೊಡಗಿದಾಗ ಯಾವ ಭಾವ ಇರುತ್ತಿತ್ತು? ಯಾವ ಮಾತು ಹೊರ ಬರುತ್ತಿತ್ತು? ನನ್ನತನ ಇರುತ್ತಿತ್ತೇ? ಬಾಬಾ, ಬಾಬಾ ಎಂದು ಹೇಳಿದಿರಿ ಆದ್ದರಿಂದಲೇ ವಾರಸುದಾರರಾದಿರಿ, ಸೇವೆಯಲ್ಲಿ ಆದಿಯಾದಿರಿ, ಇದು ಬಾಬಾ ಬಾಬಾ ಎಂದು ಹೇಳುವುದು ಸಾಕ್ಷಿಯಾಗಿದೆ.

ಈಗ ಬಾಪ್‌ದಾದಾರವರ ಬಳಿ ವಾರಸುದಾರ ಗುಣದವರು ಬಹಳ ಕಡಿಮೆ ಬರುತ್ತಾರೆ, ಏಕೆ? ಬಾಬಾ ಹಾಗೂ ನನ್ನತನ ಬೆರಕೆಯಾಗಿದೆ ಆದ್ದರಿಂದ ಈ ವರ್ಷದಲ್ಲಿ ಬಾಪ್‌ದಾದಾರವರು ತೆರೆದ ಹೃದಯದಿಂದ ವರದಾನವನ್ನು ಕೊಡುತ್ತಿದ್ದಾರೆ- ಎಷ್ಟು ಜಮಾ ಮಾಡಿಕೊಳ್ಳಲು ಬಯಸುತ್ತೀರೋ ಅಷ್ಟು ಮಾಡಿಕೊಳ್ಳಿ, ಮಾಡಿಕೊಳ್ಳಿ, ಮಾಡಿಕೊಳ್ಳಿ. ಸಫಲ ಮಾಡಿ ಸಫಲತಾ ಮೂರ್ತಿ ಆಗಿರಿ. ಒಳ್ಳೆಯದು.

ಈಗ ಯಾವ ಉತ್ಸವವನ್ನು ಆಚರಿಸಿದಿರಿ? ಸಿಲ್ವರ್ ಜುಬ್ಲಿ. ಸಿಲ್ವರ್ ಜುಬ್ಲಿಯವರು ಕೈ ಎತ್ತಿ. ಯಾರು ಸೆರೆಮನಿ (ಕಾರ್ಯಕ್ರಮ) ಆಚರಿಸಿದರು ಅವರು ಕೈ ಎತ್ತಿ. ಡಬಲ್ ಸೆರೆಮನಿ ಆಚರಿಸಿದ್ದೀರಿ. ಭಾರತದವರು ಹಾಗೂ ವಿದೇಶದವರು ಸಹ. ಒಳ್ಳೆಯದು ಈ ಸೆರೆಮನಿಯನ್ನು ಆಚರಿಸುವುದು ಅರ್ಥಾತ್ ತಮಗೆ ತಾವೇ ಪಕ್ಕಾ ಪ್ರತಿಜ್ಞೆ ಮಾಡುವುದು- ಸ್ಟ್ಯಾಂಪ್(ಮುದ್ರೆ) ಹಾಕುವುದು. ಸೆರೆಮನಿ ಆಚರಿಸಿದ್ದೀರಿ, ಬಾಪ್‌ದಾದಾರವರಿಗೂ ದೃಶ್ಯ ಚೆನ್ನಾಗಿ ಅನಿಸುತ್ತದೆ. ಜೊತೆ-ಜೊತೆಯಲ್ಲಿ ಯಾವ ಸಂಕಲ್ಪವನ್ನು ಮಾಡುತ್ತೀರಿ, ಅದಕ್ಕೆ ಈ ರೀತಿ ಸರ್ವ ಶಕ್ತಿಶಾಲಿ ಸರ್ಕಾರ (ಆಲ್ಮೈಟಿ ಗವರ್ಮೆಂಟ್) ನ ಸ್ಟ್ಯಾಂಪ್ ಹಚ್ಚಿ, ಇದು ಸದಾ ಅವಿನಾಶಿ, ಸ್ಥಿರವಾಗಿರಲಿ. ಆಚರಿಸುವುದು ಎಂದರೆ ಪ್ರತಿಜ್ಞೆಯನ್ನು ನಿಭಾಯಿಸುವುದು. ಎಂದ ಮೇಲೆ ಇಂತಹ ಪಕ್ಕಾ ಸ್ಟ್ಯಾಂಪ್ ಹಾಕಿದ್ದೀರಾ? ಅಥವಾ ಅಪರಿಪಕ್ವ ಸ್ಟ್ಯಾಂಪ್ ಹಾಕಿದ್ದೀರಾ? ಪಕ್ಕಾ ಹಾಕಿದ್ದೀರಾ? ಈ ಸಿಲ್ವರ್ ಜುಬ್ಲಿಯ ಕುಮಾರರು, ಕೈಯನ್ನಂತೂ ಚೆನ್ನಾಗಿ ಅಲುಗಾಡಿಸುತ್ತಾ ಇದ್ದಾರೆ, ಪಕ್ಕಾ ಆಚರಿಸಿದ್ದೀರಾ? ಒಳ್ಳೆಯದು. ಈ ದೃಶ್ಯವನ್ನು ಮರೆತು ಹೋಗಬೇಡಿ. ಯಾವಾಗಲೇ ಯಾವುದೇ ಬಲಹೀನತೆ ಬಂದರೆ ತಮ್ಮ ಉತ್ಸವದ ಫೋಟೋ( ಚಿತ್ರ)

ಸಮ್ಮುಖದಲ್ಲಿ ತಂದುಕೊಳ್ಳಿರಿ. ಪ್ರತಿಯೊಬ್ಬರ ಫೋಟೋ ತೆಗೆಯುತ್ತಾರೆ ಅಲ್ಲವೇ. ಎಲ್ಲರಿಗೂ ಸಿಗುತ್ತದೆಯೇ? ಸುಮ್ಮನೆ ಫೋಟೋ ತೆಗೆಯೋದಿಲ್ಲ, ಈ ಕಾರಣಕ್ಕಾಗಿ ತೆಗೆಯುತ್ತಾರೆ. ಅಂತಹ ಯಾವುದೇ ಸಮಯ ಬಂದಾಗ ಫೋಟೋ ಸಮ್ಮುಖದಲ್ಲಿ ಇಟ್ಟುಕೊಳ್ಳುವುದಕ್ಕಾಗಿ ತೆಗೆಯುತ್ತಾರೆ, ಬೀರುವಾನಲ್ಲಿ ಮುಚ್ಚಿಟ್ಟು ಸಮಯಕ್ಕೆ ನೆನಪು ಬರದಂತೆ ಆಗಬಾರದು. ಇದು ಎಲ್ಲದಕ್ಕಿಂತ ದೊಡ್ಡ ಉಡುಗೊರೆಯಾಗಿದೆ. ಇದು ಸ್ಮೃತಿ ತರಿಸುವ ಗುರುತಾಗಿದೆ. ಒಳ್ಳೆಯದು.

ಡಬಲ್ ವಿದೇಶಿಯರು ಯಾವ ಅದ್ಭುತವನ್ನು ಮಾಡಿ ತೋರಿಸುವಿರಿ. ಡಬಲ್ ವಿದೇಶಿಯರು ಇಂತಹ ಅದ್ಭುತವನ್ನು ಮಾಡಿ ತೋರಿಸಿ- ಇಂತಹ ಆತ್ಮರಿಗೆ ಸಂದೇಶವನ್ನು ಕೊಡಿ ಯಾರು ಭಾರತಕ್ಕಾಗಿ ಮೈಕ್ ( ಸಂದೇಶ ಕೊಡುವವರು) ಆಗಲಿ, ಏಕೆಂದರೆ ಭಾರತದ ಮೈಕ್ ನ ಪ್ರಭಾವವು ಇದೆ ಆದರೆ ವಿದೇಶದ ಮೈಕ್ ನ ಪ್ರಭಾವ ಎರಡರಷ್ಟು ಬೀರುವುದು. ಡಬಲ್ ವಿದೇಶಿಯರು ಇಂತಹ ಮೈಕ್ ತಯಾರು ಮಾಡಬೇಕು. ಮಾಡುತ್ತೀರಾ? ಮುಂದಿನ ವರ್ಷ ಮೈಕ್ ಬರಬೇಕು. ಕೇವಲ ಭಾಷಣ ಕೊಟ್ಟು ಹೋಗುವವರಲ್ಲ. ಸಂಬಂಧದಲ್ಲಿ ಸಮೀಪವಾಗಿರಬೇಕು. ಭಲೇ ಜ್ಞಾನ, ಯೋಗದಲ್ಲಿ ನಿಯಮಿತವಾಗಿ ಇಲ್ಲ ಆದರೆ ಅವರು ಇದು ಸತ್ಯವಾಗಿಯೂ ಈಶ್ವರೀಯ ಕಾರ್ಯವಾಗಿದೆ, ಇಂತಹ ಜೀವನವನ್ನೇ ಮಾಡಿಕೊಳ್ಳಬೇಕು ಎಂದು ತಿಳಿದಿರಬೇಕು ಆದರೆ ನನ್ನಲ್ಲಿ ಧೈರ್ಯ ಕಡಿಮೆ ಇದೆ ಎಂಬಂತೆ ಇದ್ದರೂ ಯಾವುದೇ ತೊಂದರೆ ಇಲ್ಲ, ಅನ್ಯರಿಗಾಗಿ ನಿಮಿತ್ತ ಮೈಕ್ ಆಗುತ್ತಾ ಆಗುತ್ತಾ ಸ್ವಯಂ ಆಗಿಯೇ ಬಿಡುತ್ತಾರೆ. ಇಂತಹ ನೇರವಾಗಿ ವಿದ್ಯಾರ್ಥಿಗಳು ಆಗುವುದಿಲ್ಲ ಆದರೆ ಸೇವೆಯ ಬಲದಿಂದ ಅನ್ಯರ ನಿಮಿತ್ತರಾಗುತ್ತಾರೆ, ಅವರ ಪ್ರಭಾವದಿಂದ ಆಗಿಬಿಡುತ್ತಾರೆ. ಹಾಗಾದರೆ ಡಬಲ್ ವಿದೇಶಿಯರು ಕೇಳಿಸಿಕೊಂಡಿದ್ದೀರಾ? ಈಗ ನೋಡುತ್ತೇವೆ ಯಾವ ದೇಶ ನಿಮಿತ್ತರಾಗುತ್ತಾರೆ. ಯಾವ ದೇಶ ನಿಮಿತ್ತವಾಗುತ್ತದೆಯೋ, ನಂತರ ಅವರಿಗೆ ಬಹುಮಾನ ಕೊಡುತ್ತೇವೆ.

**ಸರ್ವ ನವಯುಗದ ವಿಶ್ವಅಧಿಕಾರಿ, ನವ ಜೀವನದ ಮೂಲಕ ವಿಶ್ವ ಪರಿವರ್ತಕ ಆತ್ಮರಿಗೆ, ಸದಾ ಸಫಲ ಮಾಡಿ ಸಫಲತಾ ಮೂರ್ತಿಯಾಗುವಂತಹ ಆತ್ಮರಿಗೆ, ಸದಾ ತಾವು ಮಾಡಿರುವಂತಹ ಪ್ರತಿಜ್ಞೆಯನ್ನು ಸಾಕಾರ ರೂಪದಲ್ಲಿ ತರುವಂತಹ ಅಚಲ, ಅಖಂಡ ಸ್ವರೂಪ ಆತ್ಮರಿಗೆ, ಸದಾ ಉತ್ಸಾಹದಲ್ಲಿದ್ದು ಅನ್ಯರಲ್ಲಿ ಉತ್ಸವದ ಮೂಲಕ ಉತ್ಸಾಹವನ್ನು ತರಿಸುವಂತಹ ಆತ್ಮರಿಗೆ, ಬಾಪ್‌ದಾದಾರವರ ನವ ವರ್ಷದ ಹಾಗೂ ನವಯುಗದ ಸ್ಥಾಪನೆಯ ಶುಭಾಷಯಗಳು, ಶುಭಾಷಯಗಳು, ಶುಭಾಷಯಗಳು. ಜೊತೆ- ಜೊತೆಯಲ್ಲಿ ಧೈರ್ಯವನ್ನು ಇಟ್ಟುಕೊಂಡು ಸರ್ವ ಮಕ್ಕಳು ಮುಂದುವರೆಯುವಂತಹ ಧೈರ್ಯ ಮಕ್ಕಳದ್ದು ಸಹಯೋಗ ತಂದೆಯದ್ದು, ಇಂತಹ ಸರ್ವ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**(ರಾತ್ರಿ 12 ಗಂಟೆಯ ನಂತರ ಬಾಪ್‌ದಾದಾರವರು ಎಲ್ಲಾ ಮಕ್ಕಳಿಗೂ ಪುನಃ ನವ ವರ್ಷದ ಶುಭಾಷಯ ಗಳನ್ನು ಕೊಟ್ಟರು)**

ಸರ್ವ ವಿಶ್ವದ ಮೂಲೆ ಮೂಲೆಯಲ್ಲಿ, ವಿಶ್ವದ ನಾಲ್ಕಾರು ಕಡೆ ವಿಶೇಷ ನವ ಜೀವನದಲ್ಲಿ ಇರುವಂತಹ ಎಲ್ಲರಿಗೂ ಹೊಸ ವರ್ಷದ ಜೊತೆ ಜೊತೆ ನವಯುಗದ ಶುಭಾಷಯಗಳು, ಶುಭಾಷಯಗಳು, ಶುಭಾಷಯಗಳು. ಬ್ರಾಹ್ಮಣ ಮಕ್ಕಳಿಗಂತೂ

ಪ್ರತಿದಿನ, ಪ್ರತಿ ಕ್ಷಣ ಹೊಸದಾಗಿದೆ. ಎಂದ ಮೇಲೆ ಈಗ ಹಳೆಯ ವರ್ಷಕ್ಕೆ ಬಿಳ್ಕೊಡುಗೆ ಹೊಸ ವರ್ಷಕ್ಕೆ ಶುಭಾಷಯಗಳು. ಈ ರೀತಿ ಸದಾ ಪ್ರತಿ ಕ್ಷಣ ಯಾವುದೇ ಸಂಕಲ್ಪ ಮಾಡಿ, ಕರ್ಮ ಮಾಡಿ, ಪ್ರತಿ ಕರ್ಮ, ಸಂಕಲ್ಪ ಶುಭಾಷಯಗಳದ್ದಾಗಿರಲಿ. ಯಾರೇ ಸಂಪರ್ಕದಲ್ಲಿ ಬರಲಿ ಅವರು ಸದಾ ಶುಭಾಷಯಗಳು, ಶುಭಾಷಯಗಳು ಇದೇ ಗೀತೆಯನ್ನು ಹಾಡುತ್ತಾ ಇರಲಿ. ಈ ಹೊಸ ವರ್ಷದಲ್ಲಿ ಎಲ್ಲರಿಗೂ ಯಾರೇ ಸಿಕ್ಕರೂ,  ಯಾರೇ ಜೊತೆಯಲ್ಲಿ ಇದ್ದರೂ ಅವರಿಗೆ ಸದಾ ಖುಷಿಯ, ದಿಲ್ ಖುಷ್ ಮಿಠಾಯಿಯನ್ನು ತಿನ್ನಿಸುತ್ತಾ ಇರಿ ಹಾಗೂ ಸದಾ ಖುಷಿಯಲ್ಲಿ ಮನಸ್ಸಿನಿಂದ ನರ್ತಿಸುತ್ತಾ ಇರಿ ಹಾಗೂ ಸೇವೆಯಲ್ಲಿ ಎಲ್ಲರಿಗೂ ಖುಷಿಯ ಖಜಾನೆಯನ್ನು ತುಂಬಿ ತುಂಬಿ ಹಂಚುತ್ತಿರಿ. ಇಂತಹ ಹೊಸ ಜೀವನ, ಹೊಸ  ಉತ್ಸಾಹ-ಉಲ್ಲಾಸದ ನಾಲ್ಕಾರು ಕಡೆಯ ಮಕ್ಕಳಿಗೆ ಹೊಸ ವರ್ಷದ ಜೊತೆ ಜೊತೆ ಶುಭಾಷಯಗಳು, ಶುಭಾಷಯಗಳು. ಶುಭರಾತ್ರಿ ಹಾಗೂ ಶುಭೋದಯ. ಒಳ್ಳೆಯದು. ಓಂ ಶಾಂತಿ.

ರಿವೈಸ್ ಕೋರ್ಸ್ 31-12-1997.

***ಈ ಹೊಸ ವರ್ಷವನ್ನು ಮುಕ್ತಿ ವರ್ಷವನ್ನಾಗಿ ಆಚರಿಸಿ, ಸಫಲ ಮಾಡಿ ಸಫಲತೆಯನ್ನು ಪಡೆಯಿರಿ.***

ಮುಕ್ತಿ ವರ್ಷವನ್ನು ಆಚರಿಸಿದಾಗ ಮುಕ್ತಿ ಧಾಮಕ್ಕೆ ಹೋಗುವಿರಿ. ಇದಕ್ಕಾಗಿ ಏನು ಮಾಡಬೇಕು ಬಹಳ ಚಿಕ್ಕ ಮಾತಾಗಿದೆ, ದೊಡ್ಡ ಮಾತೇನಲ್ಲ. ಬಾಪ್‌ದಾದಾರವರು ಕೇವಲ ಒಂದು ಸ್ಲೋಗನ್ ಕೊಡುತ್ತಿದ್ದಾರೆ "ಸಫಲ ಮಾಡಿ ಸಫಲತೆಯನ್ನು ಪಡೆಯಿರಿ." ಏನನ್ನು ಸಫಲ ಮಾಡಬೇಕು? ನಿಮ್ಮ ಬಳಿ ಯಾವ ಸಂಪತ್ತಿದೆಯೋ ಸಮಯ, ಸಂಕಲ್ಪ, ಶ್ವಾಸ ಹಾಗೂ ತನು, ಮನ, ಧನವನ್ನು ಸಫಲ ಮಾಡಿ ವ್ಯರ್ಥವಾಗಿ ಕಳೆಯಬೇಡಿರಿ. ಆಪತ್ತಿನ ಕಾಲಕ್ಕಾಗಿ ಸಂಭಾಲನೆ ಮಾಡಿಕೊಂಡು ಇಡಬೇಡಿ. ಸಂಕಲ್ಪವನ್ನು ಸಫಲ ಮಾಡಿ. ಒಂದೊಂದು ಸಂಕಲ್ಪವೂ ನಿಮ್ಮ ಪ್ರಾಪರ್ಟಿ ಆಗಿದೆ. ಯಾವ ರೀತಿ ಧನವು ಸ್ಥೂಲ ಸಂಪತ್ತಾಗಿದೆಯೋ, ಅದೇ ರೀತಿ ಸಮಯ, ಶ್ವಾಸ, ಸಂಕಲ್ಪ ಕೂಡ ಸೂಕ್ಷ್ಮ ಸಂಪತ್ತಾಗಿದೆ. ಒಂದೊಂದು ಸಂಕಲ್ಪವು ವ್ಯರ್ಥವಾಗಿ ಹೋಗದಿರಲಿ. ಸಫಲವಾಗಲಿ, ಮನಸಾ,  ವಾಚಾ, ಕರ್ಮಣಾ ಯಾವುದಾದರೂ ಒಂದು ರೀತಿಯಲ್ಲಿ ಎಷ್ಟು ಸಫಲ ಮಾಡಿಕೊಂಡೆನು? ಎಂದು ಪರಿಶೀಲಿಸಿಕೊಳ್ಳಿರಿ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮನನ್ನ ತಂದೆ.

1. ನಾನು ನವಯುಗದ  ಹೊಸ ಶರೀರ ರೂಪಿ ವಸ್ತ್ರ, ರಾಜ್ಯ, ದಾಸಿಯಾಗಿ, ಸತೋ ಪ್ರಧಾನವಾಗಿ ಇರುವ ಪ್ರಕೃತಿಯನ್ನು, ಆ ರಾಜ್ಯಾಧಿಕಾರಿ ಸ್ಥಿತಿಯ ಸ್ಮೃತಿಯನ್ನು ಸ್ಪಷ್ಟವಾಗಿ ಅನುಭವ ಮಾಡುತ್ತಿದ್ದೇನೆ.

2. ನಾನು ಒಂದು ಕ್ಷಣದಲ್ಲಿ ಹೊಸ ಪ್ರಪಂಚಕ್ಕೆ ಹೋಗಿ ನನ್ನ ರಾಜ್ಯ ಎಷ್ಟು ಅತೀತವಾದದ್ದು, ಪ್ರಿಯವಾದದ್ದು ಎಂದು ನನ್ನ ವಿಶ್ವ ರಾಜ್ಯಾಧಿಕಾರವನ್ನು ಅನುಭವ ಮಾಡಿಕೊಳ್ಳುತ್ತಿದ್ದೇನೆ.

3. ನಾನು ತಂದೆಯಿಂದ  ನವಯುಗದ,  ವಿಶ್ವರಾಜ್ಯಾಧಿಕಾರದ ಅವಿನಾಶಿ, ಅಚಲ, ಅಖಂಡವಾದ ಉಡುಗೊರೆಯನ್ನು ಪಡೆದಿದ್ದೇನೆ.

4. ನಾನು ಸಂಗಮಯುಗದಲ್ಲಿ ಸರ್ವ ಧರ್ಮಸ್ಥಾಪಕರಿಗೆ, ಎಲ್ಲಾ ವರ್ಗದವರಿಗೆ ಬೀಜವನ್ನು  ಹಾಕುವ ವಿಶ್ವಕಲ್ಯಾಣಕಾರಿ, ಸರ್ವಾತ್ಮರಿಗೆ ಉದ್ಧಾರ ಮೂರ್ತಿ.

5. ನಾನು ಮನಸ್ಸಿನಲ್ಲಿ ಉತ್ಸಾಹ ಉಲ್ಲಾಸಗಳಿಂದ ತಂದೆಯ ಸಮಾನವಾಗಿ ತೋರಿಸುತ್ತೇನೆ ಎಂಬ ಪ್ರತಿಜ್ಞೆಯ ಪ್ರತ್ಯಕ್ಷ ಸ್ವರೂಪ.

6. ನಾನು "ನಾನು" ಎಂಬ ಮಾಯೆಯನ್ನು ಬರಲು ಕೊಡದೆ ಡಬಲ್ ಲಾಕ್ ಹಾಕಿದ್ದೇನೆ.

7. ನಾನು ಸಮಯವನ್ನು, ಸಂಕಲ್ಪಗಳನ್ನು, ಶ್ವಾಸ ಮತ್ತು ತನು, ಮನ, ಧನವನ್ನು ಸಫಲ ಮಾಡಿಕೊಂಡು  ಸಫಲತೆಯನ್ನು ಪಡೆಯುವ ಸಫಲತಾ ಮೂರ್ತಿ.

8. ನಾನು ಮನಸಾ,  ವಾಚಾ, ಕರ್ಮಣಾದಿಂದ ಎಷ್ಟು ಸಫಲತೆ(ಜಮಾ) ಮಾಡಿಕೊಂಡಿದ್ದೇನೆ ಎಂದು ಪರಿಶೀಲಿಸಿಕೊಂಡು ಜಮಾ ಖಾತೆಯನ್ನು ಹೆಚ್ಚಿಸಿಕೊಂಡಿದ್ದೇನೆ.

9. ನಾನು ಸಫಲ ಮಾಡಿಕೊಳ್ಳಿ ಪದಮಾ ಪದಂ ಸಫಲತೆಯನ್ನು ಅನುಭವ ಮಾಡಿಕೊಳ್ಳಿರಿ ಎಂದು ಬಾಪ್‌ದಾದಾ ಕೊಡುತ್ತಿರುವ ವರದಾನದ ವರದಾನಿಯಾಗಿದ್ದೇನೆ.

10. ನಾನು ಜ್ಞಾನ ಧನ, ಶಕ್ತಿಗಳಧನ, ಗುಣದ ಧನ, ಪ್ರತಿಯೊಂದು ಸಮಯವನ್ನು ಸಫಲತೆ ಮಾಡುವ ಎವೆರ್ ರೆಡಿಯಾಗಿ ಇದ್ದೇನೆ.

11. ನಾನು ಮಾಡಿದ್ದೇನೆ, ಇದು ನನ್ನ ಸೇವೆಯಾಗಿದೆ, ಇದು ನನ್ನ ಕಾರ್ಯವಾಗಿದೆ ಹೀಗೆ ನಾನು ಮತ್ತು ನನ್ನದು ಎಂಬ ವ್ಯರ್ಥ ಖಾತೆಯನ್ನು ಸಮಾಪ್ತಿ ಮಾಡಿ ನಾನು ಎಂಬ ಭಾವನೆಗೆ ಅತೀತವಾಗಿ ತಂದೆ ಮಾಡಿಸುತ್ತಿದ್ದಾರೆ ತಂದೆಯ ಸೇವೆ ತಂದೆ-ತಂದೆ ಎಂದು ಭಾವಿಸಿ, ಪದಮಾಪದಂ ಜಮಾ ಮಾಡಿಕೊಂಡಿದ್ದೇನೆ.

12. ನಾನು ಎಲ್ಲವನ್ನು ಸಫಲ ಮಾಡುವ ಸಫಲತಾ ಮೂರ್ತಿ.